# ವಾರ್ಡ್ ಸಭೆ ಸಂಖ್ಯೆ.19

ದಿನಾಂಕ: 01.10.2021 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ರಾಜೇಶ್ವರಿ ಸಹಾಯಕ ಆಯುಕ್ತರು ಕಲ್ಯಾಣ (ಅಧ್ಯಕ್ಷರು)
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
3. ಶ್ರೀಮತಿ ಮಮತ ಆರೋಗ್ಯ ವೈದ್ಯಾಧಿಕಾರಿಗಳು, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ,
4. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
5. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು.
6. ಶ್ರೀಮತಿ ಕಮಲ ಸದಸ್ಯರು.
7. ಶ್ರೀ ರಾಜೇಶ್ ಸದಸ್ಯರು.
8. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
9. ಶ್ರೀ ನಾಗೇಂದ್ರ ಸದಸ್ಯರು.
10. ಶ್ರೀ ಗೋಪಿ ಸದಸ್ಯರು.
11. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
14. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ಮಲ್ಲಯ್ಯ, ವಲಯ ಅರಣ್ಯಾ ಸಂರಕ್ಷಣಾ ಇಲಾಖೆ, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
16. ಶ್ರೀ ನಿಂಗರಾಜ ಎನ್ ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
17. ಶ್ರೀ ನಾಸೀರ್ ಬೀದಿ ದೀಪ ಗುತ್ತಿಗೆದಾರರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
18. ಶ್ರೀ ಸುರೇಶ್ ಬಾಬು ಎ.ಎಸ್.ಐ, ಮಹಾಲಕ್ಷ್ಮೀ ಬಡಾವಣೆ ಪೋಲೀಸ್‌ಠಾಣೆ.
19. ಶ್ರೀ ದೀಪಕ್ ಗಣಕಯಂತ್ರ ನಿರ್ವಾಹಕರು, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ,

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3. | ಸಾರ್ವಜನಿಕರು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಆರೋಗ್ಯ ವೈದ್ಯಾಧಿಕಾರಿಗಳು ಸಭೆಗೆ ಮಾಹಿತಿ ತಿಳಿಸಿದರು. | – |
| 4. | ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು ರವರು ವಾರ್ಡ್‌ನಲ್ಲಿ ಸಿಸಿ ಕ್ಯಾಮರಗಳು, ಹಾಗೂ ಅಶೋಕಪುರದಲ್ಲಿ ಮ್ಯಾನ್ ಹೋಲ್‌ಗಳು ತುಂಬಿದ್ದು ಹೂಳನ್ನು ತೆಗೆಯಲು ಹಾಗೂ ಸ್ಟ್ರೀಟ್ ಲೈಟ್ಸ್ ಸರಿಪಡಿಸಲು ಕೋರಿದರು. ಇದಕ್ಕೆ ಮಾನ್ಯ ಅದ್ಯಕ್ಷರು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ, ಸಹಾಯಕ ಅಭಿಯಂತರರು ಬೀದಿ ದೀಪ |

Scanned with CamScanner

| | | |
|---|---|---|
| 5. | ವಾರ್ಡ್ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ 476 ರಸ್ತೆ ಗುಂಡಿಗಳು ಇದ್ದು, ಇಲ್ಲಿಯ ತನಕ 80 ಗುಂಡಿಗಳನ್ನು ಮುಚ್ಚಲಾಗಿರುತ್ತದೆ ಹಾಗೂ ದಿನಾಂಕ:07.10.2021 ರೊಳಗೆ ಎಲ್ಲಾ ಗುಂಡಿಗಳನ್ನು ಮುಚ್ಚಲಾಗುವುದು ಹಾಗೂ 2021-22 ನೇ ಸಾಲು ಮುಗಿಯುವ ತನಕ ಹೊಸದಾಗಿ ರಸ್ತೆ ಅಗೆತವನ್ನು ಮಾಡುವಂತಿಲ್ಲ ಎಂದು ತಿಳಿಸಿದರು. | ವಾರ್ಡ್ ಅಭಿಯಂತರರು |
| 6. | ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು ರವರು ಗಜಾನನ ಸ್ಲಂ-1 ಮುಖ್ಯರಸ್ತೆಯಲ್ಲಿ ಚರಂಡಿ ಸರಿಪಡಿಸಲು ಸೂಚಿಸಿದರು. ಇದಕ್ಕೆ ಮಾನ್ಯ ಅದ್ಯಕ್ಷರು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. | ವಾರ್ಡ್ ಅಭಿಯಂತರರು |
| 7. | ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು ಗಜಾನನ ಸ್ಲಂ-1 ರಲ್ಲಿ 150 ಮನೆಗಳಿದ್ದು 24 ಮನೆಗಳಿಗೆ ಮಾತ್ರ ನೀರಿನ ಮೀಟರ್ ಅಳವಡಿಸಲಾಗಿರುತ್ತದೆ ಉಳಿಕೆ ಮನೆಗಳಿಗೆ ನೀರಿನ ಮೀಟರ್ ಇರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅದ್ಯಕ್ಷರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರಿಗೆ ಕ್ರಮ ಕೈಗೊಳ್ಳಲು ಸೂಚಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್. ಬಿ ಇಲಾಖೆ |
| 8. | ಸಾರ್ವಜನಿಕರು ಸೋಫ್ ಫ್ಯಾಕ್ಟರಿ ಪಕ್ಕದ ರಸ್ತೆಯಲ್ಲಿ ನೋಪಾರ್ಕಿಂಗ್ ಫಲಕ ಅಳವಡಿಸಿದರು ಸಹ ಸಾರ್ವಜನಿಕರು ವಾಹನಗಳನ್ನು ನಿಲ್ಲಿಸಿ ಹೋಗುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆ |
| 9. | ಸಾರ್ವಜನಿಕರು ವಾರ್ಡ್ ವ್ಯಾಪ್ತಿಯಲ್ಲಿರುವ ಗಿಡಗಳನ್ನು ಟ್ರಿಮ್ಮಿಂಗ್ ಮಾಡಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಅರಣ್ಯ ಇಲಾಖೆ ರವರಿಂದ ಅನುಮತಿ ಪಡೆಯಬೇಕು ಅನುಮತಿ ಸಿಕ್ಕರೆ ಮಾತ್ರ ಟ್ರಿಮ್ಮಿಂಗ್ ಮಾಡಬಹುದು ಎಂದು ತಿಳಿಸಿದರು. | ಅರಣ್ಯ ಇಲಾಖೆ |
| 10. | ಶಂಕರನಗರದ ಮುಖ್ಯ ರಸ್ತೆಯಲ್ಲಿ ತರಕಾರಿ ಮಾರುವವರನ್ನು ತೆರವುಗೊಳಿಸಲು ಕೋರಿದರು ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಆರೋಗ್ಯ ಪರಿವೀಕ್ಷಕರು |
| 11. | ಶ್ರೀ ನಾಗೇಂದ್ರ ಸದಸ್ಯರು ರವರು ವಿಜಯಾನಂದನಗರದಲ್ಲಿ ಒಳಚರಂಡಿಗಳು ಬ್ಲಾಕ್ ಆಗಿರುತ್ತವೆ ಸರಿಪಡಿಸಲು ಕೋರಿದರು. ಇದಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಸರಿಪಡಿಸುತ್ತೇವೆ ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್. ಬಿ ಇಲಾಖೆ |
| 12. | ಶ್ರೀ ನಾಗೇಂದ್ರ ಸದಸ್ಯರು ರವರು ವಾರ್ಡ್ ವ್ಯಪ್ತಿಯಲ್ಲಿ ಐ- ಮಾಸ್ ದೀಪಗಳ ದುರಸ್ಥಿಯ ಬಗ್ಗೆ ಮಾಹಿತಿ ಕೋರಿದರು ಇದಕ್ಕೆ ನಾಸಿರ್ ಬೀದಿ ದೀಪ ಗುತ್ತಿಗೆದಾರರು 10 ದಿನಗಳೊಳಗಾಗಿ ದುರಸ್ಥಿ ಪಡಿಸಲಾಗುವುದು ಎಂದು ತಿಳಿಸಿದರು. | ಬೀದಿ ದೀಪಗಳ ನಿರ್ವಹಣೆ |
| 13. | ಶ್ರೀ ನಾಗೇಂದ್ರ ಸದಸ್ಯರು ರವರು ಕಿರ್ಲೋಸ್ಕರ್ ಫೌಂಡ್ರಿ ಹತ್ತಿರು ವಿದ್ಯುತ್ ಕಂಬ ಬಾಗಿರುತ್ತದೆ ಬೀಳುವ ಸಾದ್ಯತೆ ಇರುತ್ತದೆ ಆದ್ದರಿಂದ ಕೂಡಲೇ ಸದರಿ ವಿದ್ಯುತ್ ಕಂಬ ತೆರವುಗೊಳಿಸಲು ಕೋರಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ತೆರವುಗೊಳಿಸಲಾಗುವುದು ಎಂದು ತಿಳಿಸಿದರು. | ಬೆಸ್ಕಾಂ ಇಲಾಖೆ |
| 14. | ಸಾರ್ವಜನಿಕರು ವಾರ್ಡ್ ವ್ಯಾಪ್ತಿಯಲ್ಲಿ ಗಾಂಜ ಸೇವನೆ ಹೆಚ್ಚಾಗಿರುತ್ತದೆ ಇದನ್ನು ತಡೆಗಟ್ಟಬೇಕು ಎಂದು ಕೋರಿದರು. ಇದಕ್ಕೆ ಮಾನ್ಯ ಅದ್ಯಕ್ಷರು ಪೋಲೀಸ್ ಠಾಣಾಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಪೋಲೀಸ್ ಇಲಾಖೆ |
| 15. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | - |

ಅಧ್ಯಕ್ಷರು

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner